## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ.984-2012** **ಪಿ ಡಬ್ಲುಃ1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಶಿವಾರಾಜ್<br>35 ವರ್ಷ<br>ಅಬಕಾರಿ ನಿರೀಕ್ಷಕರು<br>ನಂಜನಗೂಡು ವಲಯ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 30-03-2021.** |

### 299 ಸಿ.ಆರ್.ಪಿ.ಸಿ ಅಡಿ ವಿಚಾರಣೆಃ

### ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ

ನಾನು ಸೆಪ್ಟೆಂಬರ್ 2017 ರಿಂದ ನವೆಂಬರ್ 2020 ರವೆಗೆ ನಂಜನಗೂಡಿನ ಅಬಕಾರಿ ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇ. ಈ ಪ್ರಕರಣದ ಈ ಪ್ರಕರಣದ 2 ನೇ ಆರೋಪಿಯಾದ ವಿಜಯ್ ಕುಮಾರ್ ಬಿನ್ ಗುರುಮಾರ್ತಿ, ಪಿ.ಎನ್.ಟಿ ಕ್ವಾಟರ್ಸ್ ಕಾವಲ್ ಭೈರಸಂದ್ರ ವಿರುದ್ಧ ಘನ ನ್ಯಾಯಾಲಯ ತಲೆಮರೆಸಿಕೊಂಡಿರುವ ಆರೋಪಿಯ ವಿರುದ್ಧ ಉದ್ಘೋಷಣೆ ವಾರೆಂಟ್ ಹೊಡಿಸಿದ್ದು, ಸದರಿ ವಾರೆಂಟ್ ನ್ನು ಪಡೆದುಕೊಂಡು ದಿ. 26-12-2018 ರಂದು ಪಂಚರಾದ ಚಲುವಾರಾಜ್ ಬಿನ್ ಮುನಿಸ್ವಾಮಿ, ಪ್ರೀತಿಕೃಪ ಬಿನ್ ಪನ್ನಿರ್ ಸೆಲ್ವಂ ಹಾಗೂ ಕಾರ್ತಿಕ್ ಬಿನ್ ಕಾಶಿನಾಥ್ ರವರನ್ನು ಬರಮಾಡಿಕೂಂಡು ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ 2 ನೇ ಆರೋಪಿಯ ಬಗ್ಗೆ ವಿಚಾರ ತಿಳಿಸಿ ಪಂಚರಾಗಬೇಕೆಂದು ಕೇಳಿಕೊಂಡಾಗ ಅವರು ಒಪ್ಪಿದ ಮೇರೆಗೆ ಆರೋಪಿ ವಾಸ ಇರುವ ಮನೆಯಲ್ಲಿ ಇರುವವನ್ನು ಮತ್ತು ಅಕ್ಕ ಪಕ್ಕದ ಸ್ಥಳಿಕರನ್ನು ವಿಚಾರಿಸಲಾಗಿ ಸದರಿ ಆರೋಪಿ ಈ ವಿಳಾಸದಲ್ಲಿ ಯಾರು ಇಲ್ಲ ಎಂದು ತಿಳಿಸಿದರು. ನಂತರ ಉದ್ಘೋಷಣಾ ಪ್ರತಿಯನ್ನು ಬೀದಿಯ ಲೈಟ್ ಕಂಬಗಳಿಗೆ, ಶಾಲೆಯ ಕಾಂಪೌಂಡ್, ದೇವಸ್ಥಾನದ ಮುಂಭಾಗ ಹಾಗೂ ಪಿಎನ್ ಟಿ ಕ್ವಾಟರ್ಸ್ ಮುಂಭಾಗ ಅಂಟಿಸಿ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿ 2 ನೇ ಆರೋಪಿ ಬಗ್ಗೆ ಟಾಂ ಟಾಂ ಮೂಲಕ ಪ್ರಚುರ ಪಡಿಸಿ ಆ ವ್ಯಕ್ತಿಯ ಬಗ್ಗೆ ತಮಗೆ ತಿಳಿದು ಬಂದಲ್ಲಿ ಕೂಡಲೇ ನಮ್ಮ ಕಚೇರಿಗೆ ಮಾಹಿತಿ ನೀಡವಂತೆ ತಿಳಿಸಿ ಹಾಗೂ ನ್ಯಾಯಲಯಕ್ಕೆ ಹಾಜರಾಗುವಂತೆ ತಿಳಿಸಿದೆನು. ಮಧ್ಯಾಹ್ನ 3.00 ಗಂಟೆಯಿಂದ 4.15 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಲಾಯಿತು ಸಾಕ್ಷಿಗೆ ಮಹಜರ್ ಪ್ರತಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು ನಿಪಿ–1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ವಾರೆಂಟ್‌ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು.

ದಿ.27–12–2018 ರಂದು ಪಂಚರಾದ ವಿರುಪಾಕ್ಷ ಬಿನ್ ಮಲ್ಲಿಕಾರ್ಜುನ, ರಮೇಶ ಬಿನ್ ಬಿಳಿಗಿರಯ್ಯ ಈ ಪ್ರಕರಣದಲ್ಲಿ ಬರಮಾಡಿಕೂಂಡು ನ್ಯಾಯಾಲಯದ ಮುಂದೆ 2 ನೇ ಆರೋಪಿ ತಲೆಮರೆಸಿಕೊಂಡ ಬಗ್ಗೆ ಪ್ರಚುರಪಡಿಸಿ ನ್ಯಾಯಾಲಯದ ಆವರಣದ ಕಾಂಪೌಂಡ್ ಮೇಲೆ ಉದ್ಘೋಷಣಾ ಪ್ರತಿಗಳನ್ನು ಅಂಟಿಸಿ, ಬೆಳಗ್ಗೆ 11.00 ರಿಂದ 12.00 ರವರೆಗೆ ಮಹಜರ್ ಕ್ರಮ ಜರುಗಿಸಲಾಯಿತು. ಸಾಕ್ಷಿಗೆ ಮಹಜರ್ ಪ್ರತಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಜಪ್ತು ವಾರೆಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ದಿ.07-12-2019 ರಂದು 2 ನೇ ಆರೋಪಿಗೆ ಸಂಬಂಧಿಸಿದ ಚರ ಹಾಗೂ ಸ್ಥಿರ ಆಸ್ತಿಯ ಬಗ್ಗೆ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ಬೆಂಗಳೂರು ರವರಿಗೆ ಪತ್ರವನ್ನು ರವಾನಿಸಿದ್ದು ಅಪರ ಜಿಲ್ಲಾಧಕಾರಿಗಳು ಬೆಂಗಳೂರು ರವರು ದಿ.31-01-2020 ರಂದು ಸದರಿ ಆರೋಪಿ ಹೆಸರಿನಲ್ಲಿ ಯಾವುದೇ ಚರ ಹಾಗೂ ಸ್ಥಿರ ಆಸ್ತಿಗಳು ಇರುವುದಿಲ್ಲ ಎಂದು ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**